ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 4, January- February 2025, Pp. 42-46
©*IIMRD*, Mysuru

IIMRD JOURNALS
www.iimrd.com

# ಕಣಿಯನ್ ಸಮುದಾಯದ ಮೂಲ ಮತ್ತು ಪೌರಾಣಿಕ ಹಿನ್ನಲೆ

**ಡಾ. ಲೋಕೇಶ್ ಎಸ್**
ಭಾರತೀಯ ಬಹುಶಿಸ್ತ್ರೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ, ಮೈಸೂರು

**ಸಾರಾಂಶ: (Abstract)**

*ಭಾರತದಲ್ಲಿ ಕಂಡು ಬರುವ ಅನೇಕ ಬುಡಕಟ್ಟುಗಳಲ್ಲಿ ಪ್ರತಿಯೊಂದು ಸಮುದಾಯಗಳು ತಮ್ಮದೇ ಆದ ಧಾರ್ಮಿಕ ಹಿನ್ನೆಲೆಯ ದೃಷ್ಟಿಯಿಂದಾಗಿ ಹಲವಾರು ಪೌರಾಣಿಕ ಹಿನ್ನೆಲೆಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಭಿನ್ನ ಸ್ವರೂಪದ ಜೀವನ ಶೈಲಿಯನ್ನು ಹೊಂದಿರುವ ಅನೇಕ ಸಮುದಾಯಗಳಲ್ಲಿ ಕಣಿಯನ್ ಸಮುದಾಯವು ಒಂದು. ಇವರ ಹಿನ್ನಲೆಗೆ ಸಂಬಂದಿಸಿದಂತೆ ಅನೇಕ ಪೌರಾಣಿಕ ಕಥೆಗಳು ಪ್ರಚಲಿತದಲ್ಲಿವೆ. ಈ ಕಥೆಗಳಿಂದ ಕಣಿಯನ್ ಸಮುದಾಯದ ಜೀವನ ವಿಧಾನ ಮತ್ತು ಸಂಸ್ಕೃತಿಯನ್ನು ತಿಳಿದುಕೊಳ್ಳಬಹುದಾಗಿದೆ. ಮತ್ತು ಅದರ ಮೂಲಕ ಸಮುದಾಯದ ಇತಿಹಾಸವನ್ನು ತಿಳಿಯಲು ಪ್ರಯತ್ನಿಸಲಾಗಿದೆ.*

**ಮುಖ್ಯಪದಗಳು (Keywords):** ಕಣಿಯನ್, ಕಣಿಯರು, ಬುಡಕಟ್ಟು ಸಮುದಾಯ, ಹಿಂದುಳಿದ ಸಮುದಾಯ.

**ಪೀಠಿಕೆ**

ಕಣಿಯನ್‌ರು ಸಮುದಾಯದವರು ತಮ್ಮ ವೃತ್ತಿಯ ಮೂಲ ಮತ್ತು ಸಮುದಾಯದ ಹಿನ್ನಲೆಯನ್ನು ಅನೇಕ ಪೌರಣಿಕ ಕಥೆಗಳ ಮೂಲಕ ಗುರುತಿಕೊಳ್ಳುತ್ತಾರೆ. ಸಮುದಾಯದ ಹಿರಿಯರು ಮತ್ತು ಹಿಂದಿನ ಕೆಲವು ಅಧ್ಯಯನದಲ್ಲಿ ಗುರುತಿಸಿರುವಂತೆ (ಎಲ್.ಕೆ.ಅನಂತಕೃಷ್ಣ ಅಯ್ಯರ್, 1909) ಈಶ್ವರನ ಮಗನಾದ ಸುಬ್ರಮಣ್ಯ ಸ್ವಾಮಿ ಮತ್ತು ಆತನ ಸ್ನೇಹಿತ ಇಬ್ಬರೂ ಜೊತೆಯಲ್ಲಿ ಜೋತಿಷ್ಯಶಾಸ್ತ್ರವನ್ನು ಅಭ್ಯಾಸ ಮಾಡುತ್ತಿದ್ದರು. ಒಂದು ದಿನ ಜೋತಿಷ್ಯವನ್ನು ಪರಿಪಾಠ ಮಾಡುತ್ತಿದ್ದಾಗ ಹಲ್ಲಿಯೊಂದು ಲೊಚ ಲೊಚ ಎಂಬ ಶಬ್ದ ಮಾಡಿತು. ಹಲ್ಲಿಯ ಭಾಷೆಯನ್ನು ಅರ್ಥೈಸಿಕೊಂಡು ಇವರಿಬ್ಬರಿಗೂ ಈಶ್ವರನ ಮಡದಿ ಪಾರ್ವತಿಗೆ ತೊಂದರೆಯಾಗುತ್ತದೆ ಎಂಬ ಮುನ್ಸೂಚನೆಯನ್ನು ತಿಳಿದರು. ಕನಿಯನ್ ಸಮುದಾಯದ ವ್ಯಕ್ತಿ ತನ್ನ ಮಾಂತ್ರಿಕ ಶಕ್ತಿಯಿಂದ ಪಾರ್ವತಿಗೆ ಆಗಬಹುದಾದ ಗಂಡಾಂತರವನ್ನು ತಪ್ಪಿಸಿದನು. ನಂತರ ಪಾರ್ವತಿಯು ಚೇತರಿಸಿಕೊಂಡು ನಿದ್ರಾಸ್ಥಿತಿಯಿಂದ ಎಚ್ಚರವಾದಾಗ ಎದುರಿಗಿದ್ದ ಮಗನ ಸ್ನೇಹಿತನನ್ನು ಕುರಿತು ಕಣ್–ಯಾರ್ ('Kany-ar) ಎಂದು ಮನಗನ್ನು ಕೇಳೀದಳು. ಆಗ ಪಾರ್ವತಿಯ ಮಗನಾದ ಸುಬ್ರಮಣ್ಯನು ಅವನು 'ಕಣಿಯನ್' (ಜ್ಯೋತಿಷ್ಯ ಹೇಳುವವನು) ಎಂದು ಹೇಳಿದನು. ಆಗ ಪಾರ್ವತಿಯು

ಆ ಕಣಿಯನ್ ವ್ಯಕ್ತಿಗೆ ಹರಸಿದಳು ಮತ್ತು ಅಂದಿನಿಂದ ಕಣಿಯನ ಹೇಳುವುದನ್ನೆ ತನ್ನ ವೃತ್ತಿಯನ್ನಾಗಿ ಮಾಡಿಕೊಂಡನು. ಈಗಲೂ ಕೂಡ ಛತ್ರಿ, ಬೆತ್ತ ಮತ್ತು ವಿಭೂತಿಯನ್ನು ಸುಬ್ರಮಣ್ಯ ನೀಡಿರುವುದು ಎಂದು ನಂಬುತ್ತಾರೆ.

ಮತ್ತೊಂದು ಐತಿಹ್ಯದ ಪ್ರಕಾರ ಶಿವನ ಮೊದಲ ಮಗನಾದ ಸುಬ್ರಹ್ಮಣ್ಯನು ಜೋತಿಷ್ಯ ವಿದ್ಯೆ ಬಲ್ಲವನಾದ ದೇವತೆಗಳೊಬ್ಬನಾಗಿದ್ದನು. ಇವನು ಇನ್ನು ಹೆಚ್ಚಿನ ಜೋತಿಷ್ಯ ಪಾಂಡಿತ್ಯ ಗಳಿಸಿಕೊಳ್ಳಲು ಜೋತಿಷ್ಯ ಜ್ಞಾನವುಳ್ಳ ಎಲ್ಲರನ್ನೂ ಒಂದೆಡೆ ಸಭೆ ಸೇರಿಸಿದನು. ಆ ಸಭೆಯಲ್ಲಿ ದೇವಲೋಕದ (ಗಂಧರ್ವಲೋಕ) ಕನ್ಯೆಯು 'ಕಣಿ' ಎನ್ನುವ ಬ್ರಾಹ್ಮಣ ಸಂತನ ಮೊಮ್ಮಗನಾದ ಕಣಿಯನ್ ಎಂಬುವನು ಸುಬ್ರಹ್ಮಣ್ಯ ಸ್ವಾಮಿಯು ಜೋತಿಷ್ಯ ವಿದ್ಯೆಯಿಂದ ಸಂತುಷ್ಠಗೊಂಡುನು. ಸುಬ್ರಮಣ್ಯನಿಂದ ಬ್ರಾಹ್ಮಣ ಮೊಮ್ಮಗನಾದ ಕಣಿಯನ್ ಎಂಬುವವನು "ನಳಿಕಾ" ಎಂಬ ಹೆಸರನ್ನು ಪಡೆದುಕೊಂಡನು ನಳಿಕಾ ಎಂದರೆ ಯಾವ ಸಂದರ್ಭದಲ್ಲಿಯೂ ಸುಳ್ಳು ಹೇಳದಿರುವವನು ಎಂದರ್ಥ. ಈ ಹಿನ್ನಲೆಯಲ್ಲಿ ದಕ್ಷಿಣ ಭಾಗದ ಮಲಬಾರಿನಲ್ಲಿ ವಾಸಿಸುತ್ತಿರುವ ಕಣಿಯನ್‌ರನ್ನು ನಳಿ ಎಂದು ಕರೆಯುವುದಾಗಿ ಹೇಳಿದ್ದಾರೆ.

ದ್ವಾಪರ ಯುಗದ ಕೊನೆಯ ಭಾಗದಲ್ಲಿ ವಿಷ್ಣುವಿನ ಅವತಾರ ಮುಗಿಯುವ ಕಾಲ ಒದಗಿತು. ಕೃಷ್ಣನು ಒಂದು ಮರದ ಮೇಲೆ ಕೊಳಲನೂದುತಾ ಕುಳಿತಿರಲು, ಒಬ್ಬ ಬೇಡನು ತಿಳಿಯದೆ ಮರದ ಮೇಲೆ ಕಾಲನ್ನಾಡಿಸುತ್ತಾ ಕುಳಿತಿದ್ದ ಕೃಷ್ಣನ ಪಾದಗಳನ್ನು ಪಕ್ಷಿ ಎಂದು ತಿಳಿದು ಕತ್ತರಿಸಿ ಹಾಕಿದನು, ಆಗ ಕೃಷ್ಣನು ಚೀರಲು ಬೇಡನು ಬಂದು ನೋಡಿದನು. ಆ ನಂತರ ಬೇಡನಿಗೆ ಆಶ್ಚರ್ಯವಾಗಿ ಜನರಿಗೆ ತಿಳಿಸಿದ. ಆಗ ಜನರು ಬಂದು ವಿಷ್ಣುವಿನ ದರ್ಶನ ಪಡೆದರು. ಅಷ್ಟಕ್ಕೆ ದ್ವಾಪರ ಯುಗ ಮುಗಿಯುವ ಕಾಲ ಬಂದಿತ್ತು. ಮತ್ತು ಅಷ್ಟರಲ್ಲಿ ಕಲಿಯುಗ ಪ್ರಾರಂಭವಾಯಿತು. ಆಗ ಎರಡನೇ ಗುಂಪೊಂದು ವಿಷ್ಣುವನ್ನು ನೋಡಲು ಬಂದರು. ಅಷ್ಟರಲ್ಲಿ ದ್ವಾಪರ ಯುಗವು ಮುಗಿದು ಕಲಿಯುಗವು ಶುರುವಾಯಿತು. ಆ ಕಾರಣದಿಂದ ಎರಡನೆ ಗುಂಪಿಗೆ ವಿಷ್ಣುವಿನ ಸ್ವರೂಪ ಕಾಣಲಿಲ್ಲ. ಆದ ಕಾರಣ ಆ ಎರಡನೆ ಗುಂಪು ಮೊದಲಿಗೆ ನೋಡಿದ ಜನರನ್ನು ವಿಷ್ಣುವಿನ ಬಗ್ಗೆ ವಿಚಾರಿಸಿ, ಆ ಜನರಿಂದ ವಿಷ್ಣವಿನ ಸ್ವರೂಪ ಕೇಳಿ ಕಣ್ಣೀರು ಸುರಿಸಿದರು. ಕಾರಣ ಆ ವಿಷ್ಣುವಿನ ದರ್ಶನ ತಮಗೆ ದೊರೆಯಲಿಲ್ಲವಲ್ಲ ಎಂಬುದೆ ಈ ಜನರ ದುಃಖಕ್ಕೆ ಕಾರಣವಾಯಿತು. ಕಣ್ಣೀರನ್ನು ಸುರಿಸಿದ ಈ ಜನರೆ ಮುಂದೆ ಕಣಿಯರದಾರು ಎಂಬುದಾಗಿ ನಾಗರಾಜೇ ಅರಸುರವರು (1977) ತಮ್ಮ ಸಂಪ್ರಬಂಧದಲ್ಲಿ ವಿವರಿಸಿದ್ದಾರೆ.

ಮತ್ತೊಂದು ಪುರಾಣದ ಪ್ರಕಾರ ಪಾರ್ವತಿ ಮತ್ತು ಶಿವನು ಸಂತೋಷದಿಂದ ಇದ್ದ ಸಂದರ್ಭದಲ್ಲಿ ಅಗ್ನಿಯು ಪಾರ್ವತಿಯ ಪ್ರೇಮಪಾಶಕ್ಕೆ ಬಿದ್ದನು. ಒಂದು ದಿನ ಇವರಿಬ್ಬರು ಜೊತೆಯಲ್ಲಿದ್ದಿದ್ದನ್ನು ಶಿವನು ಕಂಡನು. ಪಾರ್ವತಿಯನ್ನು ಅಗ್ನಿಯಿಂದ ದೂರ ಮಾಡಲು ಆತನಿಗೆ ಪರಿಹಾರೋಪಾಯವನ್ನು ಹೇಳಿದರು. ಅಗ್ನಿಯು ಶಿವನು ಹೇಳಿದಂತೆ ಪಾರ್ವತಿಯ ದೇಹವನ್ನು ಹೊಕ್ಕಿ ದೇಹದೊಳಗೆ ಸೇರಿದನು. ಇದರಿಂದ ಪಾರ್ವತಿಯು ಅಗ್ನಿಯ ಉರಿಯನ್ನು ತಾಳಲಾರದೆ ತುಂಬ ಸಂಕಟಪಟ್ಟಳು. ಇದನ್ನು ನೋಡಿದ ಶಿವನ ಕಣ್ಣಿಂದ ಕಣ್ಣೀರ ಹನಿ ನೆಲಕ್ಕೆ ಬಿದ್ದಿತು. ಆ ಕಣ್ಣೀರು ಹನಿಯು ದೈವ ಸ್ವರೂಪವನ್ನು ಪಡೆಯಿತು. ಆ ದೈವಸ್ವರೂಪವು ಪಾರ್ವತಿಯ ಸಂಕಟಕ್ಕೆ ಕಾರಣವನ್ನು ತಿಳಿದುಕೊಂಡು ಅದರ ಪರಿಹಾರಕ್ಕಾಗಿ ಪಂಜನ್ನು

ಮಾಡಿ ಅದರ ಮೇಲೆ ಪನ್ನೀರನ್ನು ಎರಚಿದನು. ಈ ಅವಕಾಶಕ್ಕಾಗಿ ಕಾಯುತ್ತಿದ್ದ ಅಗ್ನಿಯು ಪಾರ್ವತಿಯ ದೇಹವನ್ನು ಬಿಟ್ಟು ಉರಿಯುತ್ತಿರುವ ಪಂಜಿನೊಳಗೆ ಸೇರಿದನು. ಆಗ ಪಾರ್ವತಿಗೆ ಅಗ್ನಿಯ ಉರಿಯಿಂದ ನೋವು ನಿವಾರಣೆಯಾಯಿತು. ಅಗ್ನಿಯ ಉರಿಯಿಂದ ಪಾರು ಮಾಡಿದ ಆ ದೈವೀಸ್ವರೂಪಿ ವ್ಯಕ್ತಿಗೆ ಪಾರ್ವತಿ ದೇವಿಯು "ಇನ್ನು ಮುಂದೆ ನೀನು ನಿಮ್ಮ ಕುಲಬಾಂಧವರು ರೋಗ ರುಜಿನಗಳಿಗೆ ತುತ್ತಾದರೆ ರೋಗವನ್ನು ಶಮನ ಮಾಡುವ, ದೆವ್ವ, ಭೂತ, ಪ್ರೇತಗಳನ್ನು ಬಿಡಿಸುವಂತಹ, ಜ್ಯೋತಿಷ್ಯ/ ಭವಿಷ್ಯವನ್ನು ಹೇಳುವಂತವನಾಗು ಮತ್ತು ಈ ವೃತ್ತಿಯಲ್ಲಿ ನಿರತನಾಗು ಎಂದು ಆಶೀರ್ವದಿಸಿರಂತೆ ಅಂದಿನಿಂದ ಈ ವ್ಯಕ್ತಿಯ ಸಮುದಾಯದವರು ಜ್ಯೋತಿಷ್ಯ ಹೇಳುವುದನ್ನು ರೂಢಿಸಿಕೊಂಡರು ಎಂಬುದಾಗಿ ಹೇಳುತ್ತಾರೆ. ಜ್ಯೋತಿಷ್ಯ ಹೇಳುವ ಇವರನ್ನು ಮುಂದೆ ಕಣಿಯರೆಂದು ಕರೆದರು ಎಂಬುದಾಗಿ ಹೇಳುತ್ತಾರೆ. ಈ ರೀತಿಯಾಗಿ ಕಣಿಯನ್ ಸಮುದಾಯದ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ಪೌರಣಿಕ ಕಥೆಗಳಿರುವುದನ್ನು ಕಾಣಬಹುದಾಗಿದೆ.

ಎಲ್.ಕೆ ಅನಂತಕೃಷ್ಣ ಅಯ್ಯರ್‌ರವರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುವಂತೆ 'ಪ್ರಾಚಿನ ಕಾಲದಲ್ಲಿ ಪಾನಾನ್ಸ್, ವೇಲನ್ಸ್ ಮತ್ತು ಕಣಿಯರು ಒಟ್ಟಾಗಿ ಮಾಟ-ಮಂತ್ರ ವಿದ್ಯೆನ್ನು ಅಭ್ಯಾಸ ಮಾಡುತ್ತಿದ್ದರು. ಅದೇ ಸಂದರ್ಭಧಲ್ಲಿ ಬ್ರಾಹ್ಮಣರು ಜೋತಿಷ್ಯವನ್ನು ಅವರ ವೃತ್ತಿಯಾಗಿ ಬಳಸಿಕೊಂಡಿದ್ದರು. ಸುಮಾರು ವರ್ಷಗಳ ಹಿಂದೆ ತಲಕ್ಕಲೇಟ್ ಭಟ್ಟಾದ್ರಿಪಾಡ್ ಎಂಬುವ ಬ್ರಾಹ್ಮಣನು ಜ್ಯೋತಿಷ್ಯ ಹೇಳುವುದರಲ್ಲಿ ಸುಪ್ರಸಿದ್ದಿಯನ್ನು ಪಡೆದಿದ್ದನು. ಈ ಬ್ರಾಹ್ಮಣ ಜ್ಯೋತಿಷಿಗೆ ಒಬ್ಬ ಗಂಡು ಮಗನಿದ್ದನು. ಅವನಿಗಾಗಿ ಅಂದರೆ ಮಗನಿಗಾಗಿ ವಿಶೇಷತೆಯಿಂದ ಕೂಡಿರುವ ಒಂದು ಜಾತಕವನ್ನು ಬರೆದನು. ಅವನು ಬರೆದ ಜಾಜಕದ ಪ್ರಕಾರ ಮಗನು ದೀರ್ಘಾಯುಸ್ಸಿಯಾಗಿದ್ದನು. ಆದರೆ ಜಾತಕ ಬರೆದಿಟ್ಟ ಭಟ್ಟಾದ್ರಿಪಾಡ್ ಮಗ ಒಂದು ದಿನ ಅಕಾಲಿಕವಾಗಿ ಮರಣಹೊಂದಿದ್ದನು. ಇದರಿಂದ ವಿಚಲಿತನಾದ ಭಟ್ಟಾದ್ರಿಪಾಡ್ ಅವನು ಬರೆದಿಟ್ಟ ಜಾತಕದಲ್ಲಿ ಏನೋ ಸಮಸ್ಯೆ ಇದೆಯೆಂದು ತಿಳಿದು, ತನ್ನಷ್ಟೆ ಪ್ರಸಿದ್ದಿಯನ್ನು ಪಡೆದಿದ್ದ ಮತ್ತೊಬ್ಬ ಜ್ಯೋತಿಷಿಯ ಬಳಿ ಹೋಗಿ ಮಗನ ಜಾತಕವನ್ನು ತೋರಿಸಿದನು. ಇವರು ಚೋಳರ ರಾಜಧಾನಿಯಲ್ಲಿದ್ದರು. ಮಗನ ಜಾತಕವನ್ನು ನೋಡಿ ಸೂಕ್ಷ್ಮವಾಗಿ ಗಮನಿಸಿದ ಆ ಜ್ಯೋತಿಷಿ ಮಗನ ಜಾತಕದಲ್ಲಿ ಏನೋ ದೋಷವಿದೆ ಎಂಬುದಾಗಿ ತಿಳಿಸಿ ಕೆಲವು ಮುಖ್ಯವಾದ ದೇವರನ್ನು ಅರಾಧಿಸುವಂತೆ ಸಲಹೆ ನೀಡಿದರು. ಅವರ ಸಲಹೆ ಮೇರೆಗೆ ಬ್ರಾಹ್ಮಣ ಭಟ್ಟಾದ್ರಿಪಾಡ್‌ರವರು ತಿರುಚೂರಿನ ದೇವಸ್ಥಾನಕ್ಕೆ ಬಂದು ಅಲ್ಲಿಯೇ ಕೆಲವು ತಿಂಗಳುಗಳ ಕಾಲ ನೆಲೆಯೂರಿ ದೇವರ ಪೂಜೆ ಕೈಂಕರ್ಯವನ್ನು ಕೈಗೊಂಡರು. ಜೊತೆಗೆ ಜ್ಯೋತಿಷ್ಯ ಹೇಳುವುದರಲ್ಲಿ ಇನ್ನು ಹೆಚ್ಚಿನ ಪಾಂಡಿತ್ಯ ಪಡೆದುಕೊಂಡರು. ಹೀಗಾಗಿ ಭಟ್ಟಾದ್ರಿಪಾಡ್ ಜೋತಿಷ್ಯ ಹೇಳುವುದರಲ್ಲಿ ಮತ್ತಷ್ಟೂ ಪ್ರಸಿದ್ಧತೆಯನ್ನು ಪಡೆದನು. ಮಲಬಾರ್ ತಿರುವಾಂಕೊರು ಮತ್ತು ಕೊಚ್ಚಿನ್‌ಗಳಲ್ಲಿ ಆ ಕಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಆಡಳತಾಧಿಕಾರಿಗಳು ಜೋತಿಷ್ಯ, ಜಾತಕವನ್ನು ಬರೆಸಲು ಹಾಗೂ ಭವಿಷ್ಯವನ್ನು ಕೇಳಲು ಭಟ್ಟಾದ್ರಿಪಾಡ್‌ರವನ್ನು ಕರೆಸಿಕೋಳ್ಳುತ್ತಿದ್ದರು. ನಂತರ ಅವರಿಗೆ ಸನ್ಮಾನ ಮಾಡಿ ಮತ್ತು ಬಹುಮಾನಗಳನ್ನು ನೀಡಿ ಗೌರವಿಸುತ್ತಿದ್ದರು.

ಒಬ್ಬ ಬ್ರಾಹ್ಮಣ ವ್ಯಕ್ತಿಯ ಗುರು ಬನಾರಸ್ಸಿನಲ್ಲಿ ನೆಲೆಸಿದ್ದರು. ಒಂದು ದಿನ ಅವರು ಮಾರಣಾಂತಿಕ ಕಾಯಿಲೆಗೆ ತುತ್ತಾದರು. ಈ ವಿಷಯ ತಿಳಿದ ಬ್ರಾಹ್ಮಣನು ಅವರ ಗುರುಗಳನ್ನು ಸಾಯುವ ಮೊದಲು ನೋಡಲು ಇಚ್ಚಿಸಿ ಇದನ್ನು ಭಟ್ಟಾದ್ರಿಪಾಡ್‌ರವರ ಬಳಿ ಹೇಳಿ ಸಹಾಯ ಕೋರಿದನು. ಆಗ ಭಟ್ಟಾದಿಪಾಡನು ತಿರುಚೂರಿನ ದೇವಾಸ್ಥಾನದ ದಕ್ಷಿಣ ದಿಕ್ಕಿಗೆ ಹೋಗಿ ಅಲ್ಲಿ ಇಬ್ಬರು ವ್ಯಕ್ತಿಗಳು ನಿಮ್ಮನ್ನು ನಿಮ್ಮ ಗುರುವಿನ ಬಳಿ ಕರೆದುಕೊಂಡು ಹೋಗುವರು ಎಂಬುದಾಗಿ ಬ್ರಾಹ್ಮಣನಿಗೆ ತಿಳಿಸಿದನು. ಭಟ್ಟಾದ್ರಿಪಾಡನ ಸಲಹೆ ಮೇರೆಗೆ ಬ್ರಾಹ್ಮಣನು ದೇವಾಲಾಯದ ಬಳಿ ಬಂದಾಗ ಈ ಇಬ್ಬರು ವ್ಯಕ್ತಿಗಳು ನಿಂತಿದ್ದರು. ಯಮಕಿಂಕರರಾಗಿದ್ದರು. ಬ್ರಾಹ್ಮಣನು ತಮ್ಮನ್ನು ನಮ್ಮ ಗುರುಗಳ ಬಳಿ ಕರೆದೊಯ್ಯಿರಿ ಎಂಬುದಾಗಿ ಕೇಳಿದರು. ಆಗ ಅವರು, ನೀವು ನಮ್ಮನ್ನು ಮುಟ್ಟಿದರೆ ನಿಮ್ಮ ಗುರುಗಳ ಹತ್ತಿರ ಕರೆದುಕೊಂಡು ಹೋಗುವೆವು ಎಂಬುದಾಗಿ ಹೇಳಿದರು. ಅವರು ಹೇಳಿದಂತೆ ಬ್ರಾಹ್ಮಣನು ಅವರನ್ನು ಮುಟ್ಟಿದರು. ಆಗ ಆ ಯಮಕಿಂಕರು ಬ್ರಾಹ್ಮಣನನ್ನು ಗುರುವಿನ ಬಳಿ ಕರೆದುಕೊಂಡು ಹೋದರು.

ಯಮಕಿಂಕರರು ಬ್ರಾಹ್ಮಣನ್ನು ಕುರಿತು ನಿನಗೆ ಈ ಮಾರ್ಗವನ್ನು ಹೇಳಿಕೊಟ್ಟವರು ಯಾರು ಎಂಬುದಾಗಿ ಕೇಳಿದರು. ಬ್ರಾಹ್ಮಣನು ಭಟ್ಟಾದ್ರಿಪಾಡ್ ಎಂಬ ಒಬ್ಬ ಜ್ಯೋತಿಷಿ ಹೇಳಿದರು ಎಂಬುದಾಗಿ ತಿಳಿಸಿದನು. ಇದರಿಂದ ಯಮಕಿಂಕರರು ಭಟ್ಟಾದ್ರಿಪಾಡನ ಮೇಲೆ ಕೋಪಗೊಂಡು ಭಟ್ಟಾದ್ರಿಪಾಡನಿಗೆ ಜಾತಿ ಭ್ರಷ್ಟನಾಗು ಎಂಬುದಾಗಿ ಶಾಪವಿತ್ತರು.

ಇದನ್ನು ಮೊದಲೆ ಅರಿತಿದ್ದ ಭಟ್ಟಾದ್ರಿಪಾಡ್, ಶಾಪದಿಂದ ಒದಗಬಹುದಾದ ಕೆಟ್ಟ ಸಂದರ್ಭಗಳಿಂದ ದೂರವಾಗಲು ತನ್ನ ಕುಟುಂಬ, ಸ್ನೇಹಿತರು, ಮನೆಯನ್ನು ಬಿಟ್ಟು ದೂರ ನಡೆದನು. ಹೀಗೆ ಎರ್ನಾಕುಲಂನಿಂದ ಪೂರ್ವಕ್ಕೆ 18 ಕಿ.ಮೀ ದೂರದಲ್ಲಿದ್ದ ಪಳೂರು ಬಳಿಯಿರುವ ನದಿಯಲ್ಲಿ ದೋಣಿಯ ಮೂಲಕ ಪ್ರಯಾಣ ಬೆಳೆಸಿದನು. ಒಂದು ದಿನ ಮಧ್ಯರಾತ್ರಿಯಲ್ಲಿ ಭಯಂಕರವಾದ ಜೋರು ಮಳೆ ಬಿದ್ದಿತು. ಈ ಮಳೆ ಮತ್ತು ಬಿರುಗಾಳಿಯಿಂದ ತತ್ತರಿಸಿ ಹೋಗಿದ್ದನು. ಕೊನೆಯ ಸಂದರ್ಭದಲ್ಲಿ ದೂರದ ಒಂದು ಮನೆಯಲ್ಲಿ ದೀಪ ಬೆಳಗುತ್ತಿರುವುದನ್ನು ಕಂಡು ಕೊಂಡನು. ಆಗ ಮಳೆಯಿಂದ ಪಾರಾಗಲು ಆ ಮನೆಯ ಬಳಿಗೆ ಹೋದನು. ಆ ನಡುವೆ ತನ್ನ ಶ್ರೀಮಂತಿಕೆ, ಮಡದಿ ಮಕ್ಕಳ ನೆನಪಾಗಿ ಮೂರ್ಛೆ ಹೋಗಿ ಮನೆಯ ಮುಂದೆ ಬಿದ್ದನು.

ಆ ಮನೆ ತಿಯಾನ್ ಎಂಬ ಕಣಿಯನ್ ಮಹಿಳೆಯದು. ಆ ಮಹಿಳೆಯ ಪತಿ ಹಿಂದಿನ ದಿನ ಆಕೆಯೊಂದಿಗೆ ಜಗಳವಾಡಿಕೊಂಡು ಮನೆಬಿಟ್ಟು ಹೋಗಿದ್ದನು. ಗಂಡ ಬರಬಹುದೆಂಬ ನಿರೀಕ್ಷೆಯಲ್ಲಿದ್ದ ಮಹಿಳೆಯು ಮನೆಯೊರಗೆ ಬಂದಾಗ ಹೊರಾಂಡದಲ್ಲಿ ಮೂರ್ಛೆಯಿಂದ ಬಿದ್ದಿದ್ದ ಭಟ್ಟಾದ್ರಿಪಾಡ್‌ನನ್ನು ತನ್ನ ಗಂಡನೆಂದು ಭಾವಿಸಿ ಮನೆಯೊಳಗೆ ಕರೆದುಕೊಂಡು ಹೋದಳು. ಆ ದಿನ ರಾತ್ರಿ ಅವರಿಬ್ಬರ ನಡುವೆ ಸಮ್ಮಿನಲವಾಯಿತು. ಬೆಳಿಗ್ಗೆ ಮೇಲೆದ್ದಾಗ ಯಮಕಿಂಕರ ಶಾಪದಂತೆ ಭಟ್ಟಾದ್ರಿಪಾಡನು ಮಹಿಳೆಯ ದೈಹಿಕ ಸಂಪರ್ಕದಿಂದ ಜಾತಿ ಭ್ರಷ್ಟನಾಗಿರುವುದು ತಿಳಿಯಿತು. ನಂತರ ಅವನ ಜ್ಯೋತಿಷ್ಯ ಶಕ್ತಿಯಿಂದ ಆ ಮಹಿಳೆಯ ಗಂಡ ಸಾವನ್ನಪ್ಪಿರುವುದನ್ನು ತಿಳಿದು, ಇನ್ನೂ ಮುಂದೆ ಆಕೆಯ ಗಂಡ ಮನೆಗೆ ಹಿಂತಿರುಗಿ ಬರುವುದಿಲ್ಲ ಎಂಬ ಸತ್ಯವನ್ನು ಮನವರಿಕೆ ಮಾಡಿಕೊಟ್ಟನು. ನಂತರ ಮುಂದೆ ಇಬ್ಬರೂ ಒಟ್ಟಿಗೆ ಸಂಸಾರ

ಮಾಡಿದರು. ಇವರಿಬ್ಬರ ಸಮ್ಮಿಲನದಿಂದ ಮುಂದೆ ಇಬ್ಬರು ಮಕ್ಕಳು ಜನಿಸಿದರು. ಆ ಮಕ್ಕಳಿಗೆ ಭಟ್ಟಾದ್ರಿಪಾಡ್ ಜ್ಯೋತಿಷ್ಯ, ಭವಿಷ್ಯ, ಮಾಟ, ಮಂತ್ರ, ಗಿಡಮೂಲಿಕೆ ಔಷದ ಮುಂತಾದ ವಿದ್ಯೆಗಳನ್ನು ಕಲಿಸಿದನು. ಕಣಿಯನ್ ಸಮುದಾಯದ ಜನರು ತಮ್ಮ ಮೂಲ ಪುರುಷ ಮತ್ತು ಜೋತಿಷ್ಯ ವೃತ್ತಿಯಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದು ಇಂದಿಗೂ ಜೋತಿಷ್ಯ ಜನರ ಬದುಕಿನಲ್ಲಿ ಬಿಡಿಸಲಾಗದ ಸಂಬಂಧವನ್ನೊಂದಿರುವುದನ್ನು ಕಾಣಬಹುದಾಗಿದೆ.

ಇಂತಹ ಅನೇಕ ಪುರಾಣ ಮತ್ತು ದಂತಕಥೆಯ ಮೂಲಕ ಕಣಿಯನ್‌ರು ತಮ್ಮ ಮೂಲ, ಹಿನ್ನಲೆ, ಸಾಮಾಜಿಕ ಸ್ಥಾನಮಾನ, ವೃತ್ತಿಯ ಮೂಲ ಮುಂತಾದವುಗಳನ್ನು ಗುರುತಿಸಿಕೊಳ್ಳುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಬೋರಲಿಂಗಯ್ಯ ಹಿ.ಚಿ ಮತ್ತು ಪ್ರಭಾಕರ ಎ.ಎಸ್ (2008) ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಾಯನಕ್ಕೊಂದು ಆಕಾರ ಸಿದ್ಧಾರ್ಥ ಪ್ರಕಾಶನ ಹೊಸಪೇಟೆ.
- ಕೃಷ್ಣ ಅಯ್ಯಂಗಾರ್. ಡಿ. (1956). ಕನ್ನಡ ನಾಡಿನ ಆದಿವಾಸಿಗಳು. (ಮೈಸೂರು ರಾಜ್ಯ). ವಾರ್ತೆ ಇಲಾಖೆ, ಮೈಸೂರು ಸರ್ಕಾರ ಬೆಂಗಳೂರು, 1956. ಪು.ಸಂ. 497
- ವಂದೇ ಮಾತರಂ ಗ್ರಾಮ ರಕ್ಷಣ ಸಭಾ ತಗಡೂರು (1925). ಕಣಿಯರ ವರ್ಣ ವ್ಯವಸ್ಥೆ. ಶ್ರೀಕೃಷ್ಣರಾಜ ವಾಣಿವಿಲಾಸ ಪ್ರೆಸ್, ಮೈಸೂರು.
- ಪಾರ್ವತಮ್ಮ. ಸಿ (ಸಂ). (2007). ಆದಿವಾಸಿಗಳ ಸಮುದಾಯಗಳ ಅಭಿವೃದ್ಧಿ. ಪ್ರಸಾರಂಗ. ಕನ್ನಡ.ವಿ.ವಿ. ಹಂಪಿ.
- Buchanan, Francis. (1807). A Journey from Madras through the countries of Mysore, Canara and Malabar. London. Vol-II
- District handbook Chamarajangara -2011, Director of Census operation, Karnataka.
- Gangadhar, M. R. and Ronibala Devi., (2006). ABO and Rh (D) blood groups among the Kaniyas of Karnataka.Anthropologist. 8(2): 145-146.
- Jakkapartha Sarathy. (2003). Kaniyan. In K.S. Sing (Ed). People of India- Tamilndau. Vol-XL, Part-2, Pp-621-625
- Luiz, A.A.D. (1963). Tribes of Mysore. viswa and co, Bangalore
- Najundaih. H.V and Anathkrishna Iyer. (1930). The Mysore Tribes and Castes (Vol.IV). The Mysore University press, Mysore.